# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1044
ಸದಸ್ಯರ ಹೆಸರು : ಶ್ರೀ ಯು.ಬಿ.ವೆಂಕಟೇಶ್
ಉತ್ತರಿಸುವ ದಿನಾಂಕ : 24-02-2023
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರವು ಕಳೆದ ಮೂರು ವರ್ಷಗಳಿಂದ ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡದಲ್ಲಿನ (ಎಸ್.ಟಿ) ಅಲೆಮಾರಿ ಸಮುದಾಯಗಳ ಜನ ವಸತಿ ಯೋಜನೆಗೆ ಮೀಸಲಿಟ್ಟ ಅನುದಾನ ಎಷ್ಟು; ಖರ್ಚಾದ ಅನುದಾನ ಎಷ್ಟು; (ಸಂಪೂರ್ಣ ವಿವರವನ್ನು ಒದಗಿಸುವುದು) | ಅಲೆಮಾರಿ ಸಮುದಾಯಗಳ ವಸತಿ ರಹಿತರಿಗೆ ನಿಗಮದಿಂದ ಅನುಷ್ಠಾನಗೊಳಿಸಲಾಗುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ವಸತಿ ಸೌಕರ್ಯವನ್ನು ಕಲ್ಪಿಸಲಾಗುತ್ತಿದೆ. ಈ ಯೋಜನೆಗಳಡಿ ಸರ್ಕಾರದಿಂದ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದಿಂದ ಫಲಾನುಭವಿಗಳಿಗೆ ಜಿ.ಪಿ.ಎಸ್ ಆಧಾರಿತ ಭೌತಿಕ ಪ್ರಗತಿಗನುಗುಣವಾಗಿ ಆಧಾರ್ ಜೋಡಣೆಗೊಂಡ ಅರ್ಹ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಅದರಂತೆ, ಕಳೆದ ಮೂರು ವರ್ಷಗಳಿಂದ ಅಂದರೆ ಆರ್ಥಿಕ ವರ್ಷ 2019-20 ರಿಂದ 2022-23ನೇ ಸಾಲಿನ ಜನವರಿ-2023 ರ ಅಂತ್ಯದವರೆಗೆ ಹಿಂದಿನ ಶ್ರೇಣಿಗಳಲ್ಲಿ ಪ್ರಗತಿಯಲ್ಲಿರುವ ಮನೆಗಳನ್ನು ಒಳಗೊಂಡಂತೆ ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡದಲ್ಲಿನ (ಎಸ್.ಟಿ) ಅಲೆಮಾರಿ ಸಮುದಾಯಗಳ ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ವಸತಿ ಯೋಜನೆಗೆ ರೂ. 556.84 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. |
| ಆ) | ಅಲೆಮಾರಿ, ಅರೆ ಅಲೆಮಾರಿ ಜನ ವಸತಿಗೆ ಮೀಸಲಿಟ್ಟ ಅನುದಾನವನ್ನು ಹಿಂಪಡೆದು ಬೇರೆ ಉದ್ದೇಶಗಳಿಗೆ ಬಳಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2022-23ನೇ ಸಾಲಿನಲ್ಲಿ ಕರ್ನಾಟಕ ಪ.ಜಾತಿ / ಪ.ಪಂಗಡ ಅಲೆಮಾರಿ ಅಭಿವೃದ್ಧಿ ನಿಗಮದ ವಸತಿ ಯೋಜನೆಯಡಿ ರೂ.300.00 ಕೋಟಿಗಳನ್ನು ಹಂಚಿಕೆ ಮಾಡಲಾಗಿದ್ದು, ಆರ್ಥಿಕ ಇಲಾಖೆಯು ಸದರಿ ಅನುದಾನವನ್ನು ರಾಜೀವ್ ಗಾಂಧಿ ವಸತಿ ನಿಗಮದ ಯೋಜನೆಯಾದ ಡಾ. ಬಿ.ಆರ್ ಅಂಬೇಡ್ಕರ್ ವಸತಿ ಯೋಜನೆಗೆ ಈಗಾಗಲೇ ಅನುಮೋದಿಸಿ ಬಾಕಿ ಇರುವ ಕಂತುಗಳಿಗೆ ಉಪಯೋಗಿಸುವುದು ಹಾಗೂ ಸಮಾಜ ಕಲ್ಯಾಣ ಇಲಾಖೆಯು ಪ್ರಸ್ತಾಪಿಸಿದ ಫಲಾನುಭವಿಗಳನ್ನು ವಸತಿ ಯೋಜನೆಯಡಿ ಹೊಸದಾಗಿ ಮಂಜೂರು ಮಾಡಿದ 5 ಲಕ್ಷ ಗುರಿಯಲ್ಲಿ ಪರಿಗಣಿಸುವುದು ಎಂದು ತಿಳಿಸಿಲಾಗಿದೆ.<br><br>ಪ.ಜಾತಿ / ಪ.ಪಂಗಡ ಅಲೆಮಾರಿ ಅಭಿವೃದ್ಧಿ ನಿಗಮದ ವಸತಿ ಯೋಜನೆಯನ್ನು ರಾಜೀವ್ ಗಾಂಧಿ ವಸತಿ ನಿಗಮದಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, 2022-23ನೇ ಸಾಲಿನಲ್ಲಿ ಪ.ಜಾತಿ / ಪ.ಪಂಗಡ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗವರಿಗೆ ವಸತಿಗಾಗಿ 15000 ಮನೆಗಳ ಗುರಿಗಳನ್ನು ನಿಗಧಿಪಡಿಸುವಂತೆ ಪ್ರಸ್ತಾವನೆಯನ್ನು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಸಲ್ಲಿಸಲಾಗಿದೆ. |
| ಇ) | ಬಂದಿದ್ದಲ್ಲಿ ಈ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | |

| | | |
|---|---|---|
| ಈ) | ಕೊರಮ, ಕೊರಚ, ಹಂದಿಜೋಗಿ, ಸುಡುಗಾಡುಸಿದ್ಧ, ಚನ್ನದಾಸರು, ಹೊಲೆಯದಾಸರು, ಮಾಲದಾಸರು, ಬುಡುಗು ಜಂಗಮ, ದೊಂಬರು, ಹಕ್ಕಿಪಿಕ್ಕಿ, ಇರುಗಳಿಗ, ಮೇದ, ಗೊಂಡ ಸೇರಿ ಸುಮಾರು 73 ಅಲೆಮಾರಿ ಸಮುದಾಯಕ್ಕೆ ನ್ಯಾಯ ಒದಗಿಸುವ ಹಿನ್ನಲೆಯಲ್ಲಿ ಸರ್ಕಾರದ ರೂಪುರೇಷೆಗಳೇನು? (ಸರ್ಕಾರದ ಆದೇಶದೊಂದಿಗೆ ಮಾಹಿತಿಯನ್ನು ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ: ಸಕಇ 10 ಎಸ್‌ಎಲ್‌ಪಿ 2015, ದಿನಾಂಕ:12.01.2016ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಲೆಮಾರಿ ಸಮುದಾಯಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಅಭಿವೃದ್ಧಿಗಾಗಿ ವಸತಿ ಯೋಜನೆ, ಲೇಔಟ್ ನಿರ್ಮಾಣ ಯೋಜನೆ ತರಬೇತಿ ಮತ್ತು ಕೌಶಲ್ಯಭಿವೃದ್ಧಿ, ಭೂ ಒಡೆತನ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಸ್ವಯಂ ಉದ್ಯೋಗ ಯೋಜನೆ, ಉದ್ಯಮ ಶೀಲತಾ ಯೋಜನೆ, ಮೈಕ್ರೋ ಕ್ರೆಡಿಟ್ (ಪ್ರೇರಣ) ಯೋಜನೆ ಮತ್ತು ಇತರೇ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಮಾನ್ಯ ಜಿಲ್ಲಾಧಿಕಾರಿಯವ ಆಯ್ಕೆ ಸಮಿತಿಯಯಲ್ಲಿ ಅಲೆಮಾರಿ ಸಮುದಾಯದ ಅರ್ಹ ಫಲಾಪೇಕ್ಷಿಗಳನ್ನು ಆಯ್ಕೆಗೊಳಿಸ ಸೌಲಭ್ಯನ್ನು ಕಲ್ಪಿಸಲಾಗುತ್ತಿದೆ. (ಸರ್ಕಾರದ ಆದೇಶ ಪ್ರತಿಯನ್ನು ಅನುಬಂಧದಲ್ಲಿ ನೀಡಿದೆ.) |

**SWD/82/SDC/2023**

**(ಕೋಟ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1044 ಕ್ಕೆ
ಅನುಬಂಧ



## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಲೆಮಾರಿ / ಅರೆ ಅಲೆಮಾರಿ / ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳ ಬಗ್ಗೆ.

ಓದಲಾಗಿದೆ: 2014-15 ಹಾಗೂ 2015-16ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 182 ಮತ್ತು ಕಂಡಿಕೆ-191ರಂತೆ

*****

ಪ್ರಸ್ತಾವನೆ:

2014-15 ಮತ್ತು 2015-16ರ ಸಾಲಿನ ಆಯವ್ಯಯದಲ್ಲಿ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳನ್ನು ಗುರುತಿಸಿ ಅವರ ಅಭಿವೃದ್ಧಿಗಾಗಿ ತೆಗೆದುಕೊಳ್ಳಬೇಕಾದ ಯೋಜನೆಗಳನ್ನು ರೂಪಿಸಲಾಗುವುದೆಂದು ಘೋಷಿಸಲಾಗಿದೆ. ಅದರಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಅಲೆಮಾರಿ/ಅರೆ ಅಲೆಮಾರಿ/ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳನ್ನು 2011ರ ಜನಗಣತಿ ಮಾಹಿತಿಯಂತೆ ಲಭ್ಯವಿರುವ ಜನಸಂಖ್ಯಾ, ಅನಕ್ಷರತೆ ಪ್ರತಿಶತ ಇತ್ಯಾದಿ ವಿಷಯಗಳನ್ನು ಪರಿಶೀಲಿಸಿ ಮತ್ತು ಈ ಜಾತಿಗಳ ವೃತ್ತಿ ಮತ್ತು ಇತರ ಲಕ್ಷಣಗಳನ್ನು ಶ್ರೀ ಕೆ.ಎಸ್.ಸಿಂಗ್ ಮತ್ತು ಶ್ರೀ ಎಡ್ಗರ್‌ಥರ್‌ಸ್ಟನ್, ಇತ್ಯಾದಿ ಪುಸ್ತಕ ದಾಖಲೆಗಳ ಆಧಾರದ ಮೇಲೆ ನಿರ್ದೇಶಕರು ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ ಹಾಗೂ ನಿರ್ದೇಶಕರು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಇವರು ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಿ, ಈಗ ಜಾರಿಯಲ್ಲಿರುವ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದ ಅಲೆಮಾರಿ/ಅರೆ ಅಲೆಮಾರಿ/ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳ ಅಭಿವೃದ್ಧಿಗಾಗಿ ಈ ಕೆಳಕಂಡಂತೆ ಸರ್ಕಾರಿ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಕಇ 10 ಎಸ್‌ಎಲ್‌ಪಿ 2015 ಬೆಂಗಳೂರು ದಿನಾಂಕ:12.01.2016**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 2015-16ನೇ ಸಾಲಿನ ಆಯವ್ಯಯ ಘೋಷಣೆಯಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಲೆಮಾರಿ / ಅರೆ ಅಲೆಮಾರಿ / ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವ ಸಂಬಂಧ ಈಗ ಜಾರಿಯಲ್ಲಿರುವ ವಿವಿಧ ಕಾರ್ಯಕ್ರಮಗಳಡಿಯಲ್ಲಿ ಮೇಲ್ಕಂಡ ಸಮುದಾಯಗಳ ಸರ್ವತೋಮುಖ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಲು ಸರ್ಕಾರದ ಮಂಜೂರಾತಿ ನೀಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಅಲೆಮಾರಿ/ಅರೆ ಅಲೆಮಾರಿ ಸಮುದಾಯಗಳ ಪಟ್ಟಿ ಅನುಬಂಧ-1 ಮತ್ತು 2ರಲ್ಲಿ ನೀಡಲಾಗಿದೆ.

ಮಾದರಿ ಕಾರ್ಯಕ್ರಮಗಳು:

I. ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು:

1. ಪ್ರತಿ ಮಗುವಿಗೂ ಶಾಲೆ ಮತ್ತು ಹಾಸ್ಟೆಲ್ ಪ್ರವೇಶ.
2. ಆಶ್ರಮ ವಸತಿ ಶಾಲೆಗಳಲ್ಲಿ ವಿಶೇಷ ಪ್ರವೇಶ.
3. ಮೊರಾರ್ಜಿ ದೇಸಾಯಿ ವಸತಿಶಾಲೆ/ಕಿತ್ತೂರುರಾಣಿ ವಸತಿ ಶಾಲೆಗಳ ಪ್ರವೇಶದಲ್ಲಿ ಮೀಸಲಾತಿ ಕಲ್ಪಿಸುವುದು,
4. ರಾಜ್ಯದ ಪ್ರತಿಷ್ಠಿತ ಶಾಲೆಗಳಲ್ಲಿ ಪರಿಶಿಷ್ಟ ಜಾತಿಯ ಅಲೆಮಾರಿ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶದ ಸೌಲಭ್ಯ ಕಲ್ಪಿಸುವುದು.
5. ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವುದು.
6. ಹಾಸ್ಟೆಲ್‌ನಲ್ಲಿ ಅರ್ಹತೆ ಮೇರೆಗೆ ಪ್ರವೇಶ ನೀಡುವುದು.

**II. ವಸತಿ:**

1. ಈಗ ಜಾರಿಯಲ್ಲಿರುವ ಯೋಜನೆಗಳಂತೆ ನಿವೇಶನವಿದ್ದು, ಮನೆ ಕಟ್ಟಿಕೊಳ್ಳಲಾಗದವರಿಗೆ ಆದ್ಯತೆ ಮೇಲೆ ಹಣಕಾಸು ನೆರವು ನೀಡುವುದು.
2. ನಿವೇಶನವಿಲ್ಲದವರಿಗೆ ಸರ್ಕಾರಿ ಜಮೀನನ್ನು ಗುರುತಿಸಿ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಿವೇಶನ ಹಂಚುವುದು ಮತ್ತು ಸರ್ಕಾರಿ ಜಮೀನು ಲಭ್ಯವಾಗದ ಕಡೆ ಖಾಸಗಿ ಜಮೀನನ್ನು ಖರೀದಿಸಿ ನಿವೇಶನ ಹಂಚಿಕೆ ಮಾಡಬೇಕಾಗುತ್ತದೆ. ಹೀಗೆ ಖರೀದಿಸಿದ ಜಮೀನಿನ ನಿವೇಶನಗಳನ್ನು ಮಹಿಳೆಯ ಹೆಸರಿನಲ್ಲಿ ನೊಂದಣಿ ಮಾಡುವುದು.
3. ಪ್ರತಿ ಜಿಲ್ಲೆ/ತಾಲ್ಲೂಕಿನಲ್ಲಿ ಹೀಗೆ ವಸತಿ ಗ್ರಾಮಗಳನ್ನು ನಿರ್ಮಿಸಿ ಅಗತ್ಯ ಮೂಲಭೂತ ಸೌಕರ್ಯಗಳಾದ ನೀರು, ದೀಪ, ಚರಂಡಿಯಂತಹ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು.

**III. ಸಮುದಾಯ ಭವನಗಳ ನಿರ್ಮಾಣ:**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಅಲೆಮಾರಿ/ಅರೆ ಅಲೆಮಾರಿ ಸಮುದಾಯಗಳಿಗಾಗಿ ಅವರುಗಳ ಕಾಲೋನಿಗಳಲ್ಲಿ ಸಮುದಾಯಗಳ ಭವನ ನಿರ್ಮಾಣ ಮಾಡುವುದು.

**IV. ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ:**

1. ಈ ಸಮುದಾಯಗಳಿಗೆ ಉದ್ಯೋಗ ಪಡೆಯಲು ಮತ್ತು ಆದಾಯ ಹೆಚ್ಚಿಸಲು ವೃತ್ತಿ ಕೌಶಲ್ಯ ತರಬೇತಿಗಳನ್ನು ಮತ್ತು ಇತರ ಕೆಲಸಗಳಲ್ಲಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವುದು.
2. ಯುವತಿ / ಯುವಕರಿಗೆ ವಾಹನ ಚಾಲನ ತರಬೇತಿ ನೀಡುವುದು.

**V. ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮೂಲಕ ಈ ಸಮುದಾಯಗಳ ಅಭಿವೃದ್ಧಿಗಾಗಿ ಈಗ ಜಾರಿಯಲ್ಲಿರುವ ಕಾರ್ಯಕ್ರಮಗಳಲ್ಲಿ ಆದ್ಯತೆ ನೀಡುವುದು.**

1) ಸ್ವಯಂ ಉದ್ಯೋಗ ಯೋಜನೆ-ಸಾಂಪ್ರದಾಯಿಕ ಕಸುಬುಗಳ ಪುನರುಜ್ಜೀವನ
2) ಜಮೀನು ಇದ್ದವರಿಗೆ ವೈಯಕ್ತಿಕ ಕೊಳವೆ ಬಾವಿ ಯೋಜನೆ.
3) ಭೂ ರಹಿತರಿಗೆ ಭೂ ಒಡೆತನ ಯೋಜನೆ.
4) ಇತರೆ ಚಟುವಟಿಕೆಗಳಿಗೆ ಸಹಾಯ ಧನ / ಸಾಲ ನೀಡಿ ಉತ್ತೇಜನ ನೀಡುವುದು.

**ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ:**

**I. ರಾಜ್ಯ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಅಲೆಮಾರಿ / ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಜಾತಿಗಳ ಅಭಿವೃದ್ಧಿ ಅನುಷ್ಠಾನ ಸಮಿತಿ.**

| | | | |
|---|---|---|---|
| 1 | ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ. | – | ಅಧ್ಯಕ್ಷರು |
| 2 | ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ಆರ್.ಡಿ.ಪಿ.ಆರ್. ಇಲಾಖೆ. | – | ಸದಸ್ಯರು |
| 3 | ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ. | – | ಸದಸ್ಯರು |
| 4 | ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಇಲಾಖೆ. | – | ಸದಸ್ಯರು |
| 5 | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ. | – | ಸದಸ್ಯರು |

| | | | |
|---|---|---|---|
| 6 | ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ. | – | ಸದಸ್ಯರು |
| 7 | ವ್ಯವಸ್ಥಾಪಕರು, ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ. | – | ಸದಸ್ಯರು |
| 8 | ವ್ಯವಸ್ಥಾಪಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ. | | ಸದಸ್ಯರು |
| 9 | ನಿರ್ದೇಶಕರು, ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ. | – | ಸದಸ್ಯರು |
| 10 | ನಿರ್ದೇಶಕರು, ಪರಿಶಿಷ್ಟ ಪಂಗಡ ಸಂಶೋಧನಾ ಸಂಸ್ಥೆ, ಮೈಸೂರು. | – | ಸದಸ್ಯರು |
| 11 | ಆಡಳಿತಾಧಿಕಾರಿ, ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ | – | ಸದಸ್ಯ ಕಾರ್ಯದರ್ಶಿ |

<u>ರಾಜ್ಯ ಮಟ್ಟದ ಸಮಿತಿಯ ಪ್ರಕಾರ್ಯಗಳು:</u>

1. ಮೇಲ್ಕಂಡ ಸಮುದಾಯಗಳ ಅಭಿವೃದ್ಧಿಗಾಗಿ ಕ್ರಿಯಾ ಯೋಜನೆಗಳನ್ನು ರೂಪಿಸುವುದು.
2. ಮೇಲ್ಕಂಡ ಸಮುದಾಯಗಳ ಬಗ್ಗೆ ಅಧ್ಯಯನಗಳನ್ನು ಮಾಡಿಸಿ ಅವರಿಗೆ ಅತ್ಯಂತ ಅವಶ್ಯಕವಾದ ಕಾರ್ಯಕ್ರಮಗಳನ್ನು ರೂಪಿಸುವುದು.
3. ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ.
4. ಕಾಲ ಕಾಲಕ್ಕೆ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಮೌಲ್ಯಮಾಪನ ಮಾಡಿಸುವುದು.
5. ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವುದು.

## II. <u>ಪರಿಶಿಷ್ಟ ಜಾತಿಯ ಅಲೆಮಾರಿ / ಅರೆ ಅಲೆಮಾರಿ ಸಮುದಾಯಗಳ ಅಭಿವೃದ್ಧಿ ಕೋಶ ರಚನೆ:</u>

ಪರಿಶಿಷ್ಟ ಜಾತಿಯ ಅಲೆಮಾರಿ/ಅರೆ ಅಲೆಮಾರಿ ಸಮುದಾಯಗಳ ಅಭಿವೃದ್ಧಿಗಾಗಿ ಪರಿಣಾಮಕಾರಿಯಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರ ಕಚೇರಿಯಲ್ಲಿ ಈಗಿರುವ ಸಿಬ್ಬಂದಿಯೊಂದಿಗೆ ರಾಜ್ಯಮಟ್ಟದ ಪರಿಶಿಷ್ಟ ಜಾತಿಯ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ಕೋಶ ಪ್ರಾರಂಭಿಸುವುದು.

## III. <u>ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ:</u>

| | | | |
|---|---|---|---|
| 1 | ಜಿಲ್ಲಾಧಿಕಾರಿಯವರು | – | ಅಧ್ಯಕ್ಷರು |
| 2 | ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ | – | ಉಪಾಧ್ಯಕ್ಷರು |
| 3 | ಜಂಟಿ/ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ | – | ಸದಸ್ಯ ಕಾರ್ಯದರ್ಶಿ |
| 4 | ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು / ಸಮನ್ವಯಾಧಿಕಾರಿಗಳು | – | ಸದಸ್ಯ ಕಾರ್ಯದರ್ಶಿ |
| 5 | ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು (ಜಿಲ್ಲಾಧಿಕಾರಿಗಳು ನಾಮನಿರ್ದೇಶನ ಮಾಡುವುದು) | – | ಸದಸ್ಯರು |
| 6 | ಹೆಚ್ಚು ಜನಸಂಖ್ಯೆ ಇರುವ ಈ ಸಮುದಾಯಗಳಿಂದ ಮೂರು ಪ್ರತಿನಿಧಿಗಳು (ಜಿಲ್ಲಾಧಿಕಾರಿಗಳು ನಾಮನಿರ್ದೇಶನ ಮಾಡುವುದು) | – | ಸದಸ್ಯರು |

<u>ಜಿಲ್ಲಾ ಮಟ್ಟದ ಸಮಿತಿಯ ಪ್ರಕಾರ್ಯಗಳು:</u>

1. ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ ಅನುಬಂಧ-1 ಮತ್ತು 2ರಲ್ಲಿರುವ ಜಾತಿಗಳಲ್ಲಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಆಯ್ಕೆ ಮಾಡುವುದು ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸುವುದು.
2. ಕಾರ್ಯಕ್ರಮಗಳ ಅನುಷ್ಠಾನ ಮಾಡುವಲ್ಲಿ ತೊಡಕುಗಳಿದ್ದಲ್ಲಿ ನಿವಾರಣೆ ಮಾಡುವುದು.

3. ಈ ಸಮುದಾಯಗಳಿಗೆ ಅವಶ್ಯಕವಿರುವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರಕ್ಕೆ ಸಲಹೆ / ಶಿಫಾರಸ್ಸು ಮಾಡುವುದು.
4. ಈ ಸಮುದಾಯದ ಮಕ್ಕಳನ್ನು ವಸತಿ ಶಾಲೆ, ಆಶ್ರಮ ಶಾಲೆ ಹಾಗೂ ವಸತಿ ನಿಲಯಗಳಿಗೆ ದಾಖಲಿಸಲು ಸಹಾಯ ಮಾಡುವುದು.
5. ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ.
6. ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವುದು.

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಮತ್ತು ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಇವರುಗಳು ಸೂಕ್ತ ಪ್ರಸ್ತಾವನೆಗಳನ್ನು ಅನುಷ್ಠಾನಾಧಿಕಾರಿಗಳಿಂದ ಪಡೆದು ನಿಯಮಾನುಸಾರ ಪರಿಶೀಲಿಸಿ, ಬೇಕಾಗುವ ಅನುದಾನಗಳನ್ನು ಬಿಡುಗಡೆ ಮಾಡುವುದು.

ಈ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು 2015-16ನೆ ಸಾಲಿನ ಸಮಾಜ ಕಲ್ಯಾಣ ಇಲಾಖೆಯಿಂದ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಿಂದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನಾಂಯಡಿಯಲ್ಲಿ ಭರಿಸುವುದು (ಲೆಕ್ಕ ಶೀರ್ಷಿಕೆ 2225-01-800-0-19 & 4225-01-800-0-07 ಹಾಗೂ 2225-02-800-0-06 & 4225-02-800-0-07).

ಈ ಆದೇಶವನ್ನು ದಿನಾಂಕ:26-05-2015ರ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ರಾಜ್ಯ ಅಭಿವೃದ್ಧಿ ಪರಿಷತ್ತಿನ ಅನುಮೋದನೆ ಮೇರೆಗೆ ನೀಡಿದ ಸರ್ಕಾರಿ ಆದೇಶ ಸಂಖ್ಯೆ:ಸಕಇ 284 ಎಸ್‌ಎಲ್‌ಪಿ 2015 ದಿನಾಂಕ:23-07-2015ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಪಿ.ಎಸ್.ನಾಗರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ-1(ಪ್ರ)
ಸಮಾಜ ಕಲ್ಯಾಣ ಇಲಾಖೆ.

ಗೆ:

1) ಮಹಾಲೇಖಪಾಲರು (ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು
5) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
6) ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು
7) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ
8) ವ್ಯವಸ್ಥಾಪಕ ನಿರ್ದೇಶಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
9) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

10) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್
11) ನಿರ್ದೇಶಕರು, ಡಾ:ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ವಸಂತನಗರ, ಬೆಂಗಳೂರು
12) ನಿರ್ದೇಶಕರು, ಗಿರಿಜನ ಸಂಶೋಧನಾ ಸಂಸ್ಥೆ, ಮೈಸೂರು
13) ಎಲ್ಲಾ ಜಿಲ್ಲೆಯ ಜಂಟಿ/ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ
14) ಎಲ್ಲಾ ಜಿಲ್ಲೆಯ ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿಗಳು/ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ.
15) ಹೆಚ್ಚುವರಿ ಪ್ರತಿಗಳು/ಬಿಡಿ ಪ್ರತಿಗಳು.

ಅನುಬಂಧ-1

<u>ಪರಿಶಿಷ್ಟ ಜಾತಿಯ</u> <u>ಅಲೆಮಾರಿ ಹಾಗೂ ಅರೆ ಅಲೆಮಾರಿ ಮತ್ತು ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳನ್ನು ಗುರುತಿಸಿದ ಜಾತಿಗಳ ಪಟ್ಟಿ</u>

| ಕ್ರ ಸಂ. | ಜಾತಿಯ ಹೆಸರು | ಜನಸಂಖ್ಯೆ 2011ರ – ಜನ ಗಣತಿ | ಅನಕ್ಷರಸ್ಥರ ಸಂಖ್ಯೆ | ಪ್ರತಿಶತ | ಪಾರಂಪಾರಿಕ ವೃತ್ತಿ |
|---|---|---|---|---|---|
| 1 | DAKKAL / ~~DAKKALA~~ DAKKALIGA / | 763 ~~379~~ | 530 ~~262~~ | 50% | ಭಿಕ್ಷಾಟನೆ, ಜಾನಪದ ಕಾವ್ಯಗಳ ಗಾಯನ |
| 2 | BUDGA JANGAM (A.J.Sadashiva Commission Report) | 20733 | NA | - | ಹಗಲು ವೇಷ, ಬುರ್ರಕಥೆ, ಬೈರಾಗಿವೇಷ, ಕೊಂಡಮಾಮನ ಜ್ಯೋತಿಷ್ಯ, ಭಿಕ್ಷಾಟನೆ. *ಎ.ಜೆ.ಸದಾಶಿವ ಆಯೋಗದ ವರದಿಯಲ್ಲಿ ದಾಖಲಿಸಿರುವ ಅಲೆಮಾರಿ ಬುಡ್ಗ ಜಂಗಮರ ಜನಸಂಖ್ಯೆ* |
| 3 | HANDI JOGI | 22675 | 11251 | 50% | ಹಂದಿ ಸಾಕಾಣಿಕೆ / ಕೂಲಿ |
| 4 | SILLEKYATHAS /SILLEKYATHA | 35197 | 18807 | 53% | ಗೊಂಬೆಯಾಟ, ಹಚ್ಚೆ ಹಾಕುವುದು, ಬಂಡೆ ಬೆಸ್ತರಾಗಿ ಮೀನು ಹಿಡಿಯುವುದು, ಭಿಕ್ಷಾಟನೆ |
| 5 | SUDUGADU SIDDHA | 29457 | 17060 | 58% | ಮೋಡಿಯಾಟ, ಸಾಧು ಸಂತರ ವೇಷದಲ್ಲಿ ಭಿಕ್ಷಾಟನೆ |
| 6 | CHENNA DASAR/ HOLAY DASAR | 72,003 | 34973 | 49% | ಗರುಡಗಂಬ ಹೊತ್ತು ಭಿಕ್ಷಾಟನೆ, ಕಲಾ ಪ್ರದರ್ಶನಗಳು, ಕೋಲೆಬಸವ ಆಟ, ತತ್ವಪದ ಗಾಯನ |
| 7 | GOSANGI | 2,219 | 1151 | 50% | ದೇವಿ ಹೊತ್ತು ಭಿಕ್ಷಾಟನೆ |
| 8 | MANG GARODI / MANG GARUDI | 3,434 | 2059 | 60% | ಅಪರಾಧ ಬುಡಕಟ್ಟು ಎಂದು ಬ್ರಿಟಿಷರ ಘೋಷಣೆ, ಕಟ್ಟಡ ಕಾರ್ಮಿಕರು. |
| 9 | GANTI CHORES | 4,967 | 1872 | 38% | ಅಪರಾಧ ಬುಡಕಟ್ಟು ಎಂದು ಬ್ರಿಟಿಷರ ಘೋಷಣೆ, ಕೃಷಿಕೂಲಿ |
| 10 | DOM / DOMBARA / PAIDI / PANO | 26344 | 11872 | 45% | ದೈಹಿಕ ಕಸರತ್ತಿನ ಪ್ರದರ್ಶನ, ಕೃಷಿಕೂಲಿ |
| 11 | MALA DASARI | 4,391 | 1885 | 43% | ಧಾರ್ಮಿಕ ಭಿಕ್ಷಾ ಬೇಟೆ, ಕೃಷಿ ಕೂಲಿ, ಸಮಾನ್ಯ ವೃತ್ತಿಗಳಾಗಿವೆ. |
| 12 | MALA SANYASI MALASALE / NATKANI | 552 257 | 289 118 | 50% | ಸನ್ಯಾಸಿ, ಬೈರಾಗಿ ವೇಷ ಹಾಕಿಕೊಂಡು ಭಿಕ್ಷಾಟನೆ ಮಾಡುತ್ತಾರೆ. |
| 13 | JAGGALI | 1061 | 591 | 50% | ಚರ್ಮಗಾರಿಕೆ |
| 14 | HOLEYA DASARI | 382 | 173 | 50% | ಗರುಡಗಂಬ ಹೊತ್ತು ಭಿಕ್ಷಾಟನೆ, ಕಲಾ ಪ್ರದರ್ಶನಗಳು, ಕೋಲೆಬಸವ ಆಟ, ತತ್ವಪದ ಗಾಯನ |
| 15 | SINDHOLLU / CHINDOLLU | 1,706 | 1390 | 81% | ಸಿಂಧಾಟ, ದುರ್ಗಮುರ್ಗಿ ವೇಷ, ಚುಂಕಲಮ್ಮ ಪೂಜಾರಿ, ಭಿಕ್ಷಾಟನೆ |

| | | | | | |
|---|---|---|---|---|---|
| 16 | BAKUDA | 1566 | 448 | 29% | ಕೃಷಿ ಕೂಲಿ |
| 17 | BANDI | 678 | 322 | 50% | ಸೇದಿ ಸಾಗಣೆ, ದೇವಸ್ಥಾನದ ಹೊರಗೆ ಮಚಿಗೊಳಿಸುವುದು. |
| 18 | ASADARU, ASADI | Combined Population of various sub caste | NA | | ಅಸ್ಪೃಶ್ಯ ಸಮುದಾಯ |
| 19 | MASTHI / MANNE | 100<br>100 | 44<br>40 | 50% | ಧಾರ್ಮಿಕ ಭಿಕ್ಷುಕರು ಮತ್ತು ಹಾಡುಗಾರರು, ಹೊಲೆ ಮಾದಿಗರ ಮನೆಯಲ್ಲಿ ಹಬ್ಬಾಗಿ ಬೇಡುವರು. |
| 20 | PAMBADA | 711 | 127 | 18% | ದಕ್ಷಿಣ ಕನ್ನಡದಲ್ಲಿ ಧಾರ್ಮಿಕ ಕಾರ್ಯಾಚರಣೆಯಲ್ಲಿ ಸಂಗೀತ ನುಡುವುದು ಮತ್ತು ಗ್ರಾಮ ದೇವತೆಗಳನ್ನು ಸಂತೃಪ್ತಿಗೊಳಿಸಲು ವಾದ್ಯವನ್ನು ನುಡಿಸುವುದು ಜೊತೆಗೆ ಮೇಲ್‌ಜಾತಿಯವರ ಸಾವಿನ ಆಚರಣೆಗಳಿಗೆ ವಾದ್ಯ ನುಡುವುದು. |
| 21 | MUKRI | 11162 | 3573 | 32% | ಕಾಡಿನ ಉತ್ಪನ್ನಗಳ ಸಂಗ್ರಹ |
| 22 | BHANGI to ZADMALI | 5281 | 1931 | 37% | ಪೌರ ಕಾರ್ಮಿಕರು |
| 23 | THOTI | 1304 | 606 | 50% | ಗ್ರಾಮ ಸೇವೆ |
| 24 | ADIYA | 811 | 400 | 50% | ಕೃಷಿ ಕಾರ್ಮಿಕ |
| 25 | AGER | 6642 | 1832 | 28% | ಉಪ್ಪು ತಯಾರಿಕೆ, ಕೂಲಿ ಕಾರ್ಮಿಕರು |
| 26 | AJILA | 2448 | 776 | 32% | ಕೃಷಿ ಕಾರ್ಮಿಕ / ಕೊಡೆ / ಬುಟ್ಟಿ ತಯಾರಿಕೆ |
| 27 | BAIRA | 4049 | 1151 | 28% | ಬುಟ್ಟಿ ಹೆಣೆಯುವುದು / ಹಂದಿ ಸಾಕುವುದು |
| 28 | BATHADA | 2632 | 814 | 31% | ಕೃಷಿ ಕಾರ್ಮಿಕ |
| 29 | BELLARA | 1243 | 512 | 41% | ಕೃಷಿ ಕಾರ್ಮಿಕ ಮತ್ತು ಬುಟ್ಟಿ ಹೆಣೆಯುವುದು |
| 30 | GODDA | 1532 | 420 | 28% | ಕೃಷಿ ಕಾರ್ಮಿಕ |
| 31 | HALLEER | 3533 | 1425 | 40% | ಕೃಷಿ ಕಾರ್ಮಿಕ |
| 32 | HOLAR / VALHAR | 1548 | 690 | 45% | ಕೃಷಿ ಕಾರ್ಮಿಕ |
| 33 | JAMBUVULU | 12411 | 5677 | 46% | ಚಪ್ಪಲಿ ತಯಾರಿಕೆ |
| 34 | KALLADI | 1774 | 771 | 44% | ಚಾಪೆ ಹೆಣೆಯುವುದು |
| 35 | KOOSA | 202 | 65 | 32% | ಕೃಷಿ ಕಾರ್ಮಿಕ |
| 36 | KOTEGARMETRI | 2370 | 711 | 30% | ಚರ್ಮಗಾರಿಕೆ |
| 37 | MAILA | 1824 | 805 | 44% | ಮೀನುಗಾರಿಕೆ |
| 38 | MEGHVAL / MENGHVAR | 2057 | 947 | 46% | ಚರ್ಮಗಾರಿಕೆ |
| 39 | NADIA / HADI | 1378 | 534 | 39% | ಕೃಷಿ ಕಾರ್ಮಿಕ |
| 40 | NALKADAYA | 765 | 201 | 26% | ಕೃಷಿ ಕಾರ್ಮಿಕ |

| | | | | | |
|---|---|---|---|---|---|
| 41 | **NAYADI** | 589 | 238 | 40% | ಭೇಟೆ / ಕೃಷಿ ಕಾರ್ಮಿಕ |
| 42 | **BINDLA** | 149 | 55 | 37% | ಕೃಷಿ ಕಾರ್ಮಿಕ |
| 43 | **BYAGARA** | 2019 | 1202 | 60% | ಕೃಷಿ ಕಾರ್ಮಿಕ |
| 44 | **CHAKKALIYAN** | 574 | 291 | 51% | ಚರ್ಮಗಾರಿಕೆ |
| 45 | **PALE** | 9374 | 3618 | 33% | ಕೃಷಿ ಕಾರ್ಮಿಕರು |
| 46 | **PARAVAN** | 3528 | 1199 | 42% | ಕೊಡೆ ತಯಾರಿಕೆ ಮತ್ತು ಡೆವಿಲ್ ಡ್ಯಾನ್ಸರ್ಸ್ |
| 47 | **ARUNTHATHIYAR** | 2385 | 926 | 38% | ಚಪ್ಪಲಿ ತಯಾರಿಕೆ |
| 48 | **MADARI** | 1060 | 480 | 45% | ಚಪ್ಪಲಿ ತಯಾರಿಕೆ |
| 49 | **MACHALA** | 244 | 108 | 44% | – |

12/1/16

(ಪಿ.ಎನ್.ನಾಗರಾಜ್)

ಸರ್ಕಾರದ ಅಧೀನ ಕಾರ್ಯದರ್ಶಿ-1 (ಪ್ರ).

ಸಮಾಜ ಕಲ್ಯಾಣ ಇಲಾಖೆ.

## ಅನುಬಂಧ-2

### ಪರಿಶಿಷ್ಟ ಪಂಗಡದ ಅಲೆಮಾರಿ / ಅರೆ ಅಲೆಮಾರಿ ಸೂಕ್ಷ್ಮ ಮತ್ತು ಅತಿ ಜಾತಿಗಳ ಪಟ್ಟಿ

| ಕ್ರ.ಸಂ. | ಬುಡಕಟ್ಟಿನ ಹೆಸರು | ಜನಸಂಖ್ಯೆ- 2011ರ ಜನಗಣತಿ | ಅನಕ್ಷರಸ್ಥರ ಸಂಖ್ಯೆ | ಪ್ರತಿಶತ | ಪಾರಂಪಾರಿಕ ವೃತ್ತಿ |
|---|---|---|---|---|---|
| 1 | Chenchu, Chenchwar | 954 | 574 | 60.167 | ಬೇಟೆಯಾಡುವುದು, ಅರಣ್ಯ ಉತ್ಪನ್ನಗಳ ಸಂಗ್ರಹಣೆ |
| 2 | Gowdalu | 8617 | 3050 | 35.39 | ನೀರಾ ಇಳಿಸುವುದು. |
| 3 | Hakkipikki | 11892 | 7534 | 63.35 | ಗಿಡಮೂಲಿಕೆಗಳ ಔಷಧಿ & ತೈಲ ತಯಾರಿಕೆ ಮತ್ತು ಮಾರಾಟ ಹಾಗೂ ಮಸಾಜ್ ಮಾಡುವುದು. |
| 4 | Pardhi, Advichincher, Phanse Pardhi, Haranshikari | 10746 | 7339 | 68.295 | ಬೇಟೆಯಾಡುವುದು |
| 5 | Hasalaru | 24466 | 9954 | 40.685 | ಬೇಟೆಯಾಡುವುದು, ಬಿದಿರಿನ ಉತ್ಪನ್ನಗಳನ್ನು ತಯಾರಿಸುವುದು |
| 6 | Iruliga | 11892 | 6382 | 53.666 | ಇಲಿ ಹಿಡಿಯುವುದು. ಆಹಾರ ಸಂಗ್ರಹಣೆ, ಅರಣ್ಯ ಉತ್ಪನ್ನಗಳ ಸಂಗ್ರಹಣೆ |
| 7 | Kathodi, Katkari, Dhor Kathodi, Dhor Katkari, Son Kathodi, Son Katkari. | 280 | 152 | 54.28 | ಕಾಚು ತಯಾರಿಕೆ |
| 8 | Kudiya, Melakudi | 2169 | 677 | 31.21 | ಕೃಷಿಗಾರಿಕೆ |
| 9 | Paniyan | 495 | 273 | 55.15 | ಕೃಷಿಕೂಲಿ |
| 10 | Rajgond | 158243 (Including Gond, Naikpod) | 70706 | 44.68 | ಅಲೆಮಾರಿ ಬೇಟೆಗಾರಿಕೆ |
| 11 | Dubla, Talavia, Halpati | 264 | 120 | 45.45 | ಜೀತದಾಳುಗಳು |
| 12 | Gamit, Gamta, Gavit, Mavachi, Padvi, Valvi | 516 | 220 | 42.63 | ಕೃಷಿ, ಮೀನುಗಾರಿಕೆ. |
| 13 | Iruiar | 703 | 448 | 63.72 | ಬೇಟೆಯಾಡುವುದು, ಆಹಾರ ಸಂಗ್ರಹಣೆ |

| | | | | | |
|---|---|---|---|---|---|
| 14 | Kammara ( in Dakshina Kannada district and Kollegal taluk of Chamarajanagar District) | 949 | 421 | 44.36 | ಕಮ್ಮಾರಿಕೆ |
| 15 | Konda Kapus | 7438 | 2330 | 31.325 | ಬೇಟೆಗಾರಿಕೆ, ಆಹಾರ ಸಂಗ್ರಹಣೆ, ಕೃಷಿ |
| 16 | Koya, Bhine Koya, Rajkoya, | 365 | 178 | 48.767 | |
| 17 | Kuruba ( in Kodagu District) | 3111 | 1505 | 48.376 | ಕುರಿ ಸಾಕುವುದು, ಕಂಬಳಿ ನೇಯುವುದು |
| 18 | Medar , Medari, Gauriga, Burud | 44160 | 14728 | 33.35 | ಬಿದಿರಿನ ಉತ್ಪನ್ನಗಳನ್ನು ತಯಾರಿಸುವುದು, ಬಿದಿರಿನ ಕೆಲಸ |
| 19 | Yerava | 30359 | 17893 | 58.93 | ಕೃಷಿ ಮತ್ತು ಕಾಫಿ ತೋಟಗಳಲ್ಲಿ ಕೂಲಿಯಾಳುಗಳಾಗಿ ಕಾರ್ಯನಿರ್ವಹಿಸುವುದು. |
| 20 | Bavacha, Bamcha | 960 | 280 | 29.16 | ಹುಲ್ಲುಮಾರುವುದು. ಕುದುರೆಲಾಯಗಳಲ್ಲಿ ಕೆಲಸ ಮಾಡುವುದು. |
| 21 | Bhil, Bhil Garasia, Dholi Bhil, Dungri Bhil, Dungri Garasia, Mewasi Bhil, Rawal Bhil, Tadvi Bhil, Bhagalia, Bhilala, Pawra, Vasava, Vasave | 6204 | 3115 | 50.20 | ಬೇಟೆಯಾಡುವುದು, ಅರಣ್ಯ ಕಿರು ಉತ್ಪನ್ನಗಳ ಸಂಗ್ರಹಣೆ |
| 22 | Adiyan | 758 | 224 | 31% | ಕೃಷಿ ಕೂಲಿ, ಬುಟ್ಟಿ ಹೆಣೆಯುವುದು. |
| 23 | Barda | 266 | 95 | 40% | [illegible] ತಯಾರಿಕೆ ಇತರೆ |

12/1/16

(ಬಿ.ಎನ್. ನಾಗರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ-1 (ಪ್ರ).
ಸಮಾಜ ಕಲ್ಯಾಣ ಇಲಾಖೆ.